

ಶಿರಸಿಯ ಟಿಎಸ್ಎಸ್ ಸಂಸ್ಥೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿದರು

# ಕೃಷಿಕನಿಗೆ ದುರ್ಭಿಕ್ಷ್ಯವಿಲ್ಲ: ಸ್ವರ್ಣವಲ್ಲೀ ಸ್ವಾಮೀಜಿ

ಶಿರಸಿ: ಕೃಷಿ ಮಾಡುವವನಿಗೆ ದುರ್ಭಿಕ್ಷ್ಯವಿಲ್ಲ ಎಂದು ಸೋಂದಾ ಸ್ವರ್ಣವಲ್ಲೀಯ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ನಗರದ ಟಿಎಸ್ಎಸ್ ಸಂಸ್ಥೆಯಲ್ಲಿ ಶನಿವಾರ ಶತಮಾನೋತ್ಸವ ಆಚರಣೆಯ ಹಿನ್ನಲೆಯಲ್ಲಿ ಪಾದಪೂಜೆ, ಭಿಕ್ಷಾಸೇವೆ ಸ್ವೀಕರಿಸಿದ ಬಳಿಕ ಆಶೀರ್ವಚನ ನೀಡಿದರು.

ಉತ್ತರ ಕನ್ನಡದಲ್ಲಿ ರೈತರ ಆತ್ಮಹತ್ಯೆ ಕಡಿಮೆ ಇರಲು ಇಲ್ಲಿನ ಸಹಕಾರ ಸಂಘಗಳು ಕಾರಣ. ಜನರ, ರೈತರ ಸಾಲ ಬಾಧೆ ಕಡಿಮೆ ಆಗಿದೆ. ಇನ್ನು ಹೆಚ್ಚು ಕೃಷಿ, ಉಪ ಬೆಳೆಯ ಬಗ್ಗೆ ರೈತರು ಲಕ್ಷ್ಯ ಹಾಕಬೇಕು. ಅಡಿಕೆ ಬೆಳೆಗಾರರಿಗೆ ಕೊರೊನಾದಂಥ ಕಾಲದಲ್ಲೂ ಸಮಸ್ಯೆ ಆಗದೇ ಇರಲು ಸಹಕಾರಿ ಸಂಘಗಳು ಕಾರಣ ಎಂದರು.

ಟಿಎಸ್ಎಸ್ ಸಂಸ್ಥೆ ಒಂದು ನೂರು ವರ್ಷ ಪೂರೈಸಿದೆ ಎಂದರೆ ಸಂಸ್ಥೆಗೆ ಗಟ್ಟಿತನ. ಸಾಮಾನ್ಯ ಮನುಷ್ಯನಿಗೆ ಆದರೆ ವೃದ್ಧಾಪ್ಯ. ಸಂಸ್ಥೆಗೆ ವರ್ಷ ಕಳೆದಷ್ಟೂ ಸತ್ವ ಹೆಚ್ಚುತ್ತದೆ. ರಾಜ್ಯದ ಸತ್ವಯುತ ಸಂಸ್ಥೆ ಟಿಎಸ್ಎಸ್ ಎಂದ ಸ್ವಾಮೀಜಿ, ಆರಂಭದಿಂದಲೂ ಟಿಎಸ್ಎಸ್ ಸಂಸ್ಥೆಗೂ ಸ್ವರ್ಣವಲ್ಲೀ ಮಠಕ್ಕೂ ಆತ್ಮೀಯ ಸಂಬಂಧ ಇದೆ ಎಂದು ಹೇಳಿದರು.

ಟಿಎಸ್ಎಸ್ ಕಾರ್ಯಾಧ್ಯಕ್ಷ ರಾಮಕೃಷ್ಣ ಹೆಗಡೆ ಕಡವೆ ಮಾತನಾಡಿ, ಶತಮಾನೋತ್ಸವ ವರ್ಷಾಚರಣೆಯನ್ನು ಅಕ್ಟೋಬರ್ ನಂತರ ನಡೆಸಲಾಗುತ್ತದೆ. ಇದು ಹಿರಿಯರ ಶ್ರಮದಿಂದ ಕಟ್ಟಿದ ಸಂಸ್ಥೆ ಎಂದು ಹೇಳಿದರು. ಈ ವೇಳೆ ನಿರ್ದೇಶಕರಾದ ನೀರ್ನಳ್ಳಿ ಸೀತಾರಾಮ ಹೆಗಡೆ, ಚಂದ್ರಶೇಖರ ಹೆಗಡೆ ಹೂಡ್ಲಮನೆ, ವ್ಯವಸ್ಥಾಪಕ ನಿರ್ದೇಶಕ ರವೀಶ ಹೆಗಡೆ ಇದ್ದರು.